‘ಹೆಣ್ಣು’ ಮತ್ತು ‘ಗಂಡು’ ಎನ್ನುವವು ಎರಡು ಲಿಂಗಗಳಾದರೆ, ಒಂದು ಲಿಂಗಕ್ಕೆ ಸೇರಿದ ವ್ಯಕ್ತಿ ಹೇಗಿರಬೇಕು ಎನ್ನುವ ನಮ್ಮ ಮನಸ್ಸಿನ ಚಿತ್ರಣಗಳನ್ನು ‘ಲಿಂಗ–ರೂಪಗಳು’ ಎನ್ನಬಹುದು. ಈ ಲಿಂಗರೂಪಗಳು, ನಾವು ‘ಹೆಣ್ಣು’ ಅಥವಾ ‘ಗಂಡ’ನ್ನು ಅರ್ಥ ಮಾಡಿಕೊಂಡ ರೀತಿಗಳೋ, ಸಾಮಾಜಿಕ ಪರಿಸ್ಥಿತಿಗಳು ನಮ್ಮ ಆಲೋಚನೆಗಳನ್ನು ರೂಪಿಸಿದ ರೀತಿಯ ಪ್ರತೀಕವೋ, ನಮ್ಮವೇ ಮನಸ್ಸಿನ ಮಿತಿಗಳೋ ಆಗಿರುತ್ತವೆಯೇ ವಿನಃ, ಜೈವಿಕವಾಗಿ, ನೈಸರ್ಗಿಕವಾಗಿ ಒಂದು ಲಿಂಗಕ್ಕೆ ಆರೋಪಿಸಬಹುದಾದ ಗುಣಗಳು ಅಲ್ಲ.

ಈ ಲಿಂಗರೂಪಗಳು, ಅಂದರೆ ಹೆಣ್ಣು–ಗಂಡು ಎಂದರೆ ಯಾರು ಎಂಬ ನಮ್ಮ ಮನಸ್ಸಿನ ಚಿತ್ರಣಗಳು; ಒಂದು ರೀತಿಯಲ್ಲಿ ನೋಡಿದರೆ, ವ್ಯಕ್ತಿ ಹಾಗೂ ವ್ಯಕ್ತಿತ್ವಗಳ ಮೇಲೆ ನಾವು ಹೊರಿಸುವ ನಿರ್ಬಂಧಗಳೂ ಆಗಿರುತ್ತವೆ. ಅಂದರೆ, ‘ಹೆಣ್ಣು’ ಹೀಗೆಯೇ ಇರಬೇಕು ಅಥವಾ ‘ಗಂಡು’ ಹೀಗೆಯೇ ಇರಬೇಕು ಎಂಬುದನ್ನು, ಎಷ್ಟೋ ಬಾರಿ ನಮಗರಿವಿಲ್ಲದೆಯೂ ನಾವು ಇನ್ನೊಬ್ಬರ ಮೇಲೆ ಹೇರುತ್ತಿರುತ್ತೇವೆ.

‘ಗಂಡುಬೀರಿ’ ಅಂದರೆ ಯಾರು? ಗಂಡಸಿನಂತೆ ವರ್ತಿಸುವ ಹೆಂಗಸರನ್ನು ‘ಗಂಡುಬೀರಿ’ ಎಂದು ಕರೆಯುತ್ತೇವೆ. ಆದರೆ, ಈ ಪದ ಮನೆಯ ಗಂಡಸಿನಂತೆ ದುಡಿದು ಮನೆಯನ್ನು ನೋಡಿಕೊಳ್ಳುವ ಹೆಂಗಸರನ್ನು ಸಂಬೋಧಿಸುವ ಸಕಾರಾತ್ಮಕ ವಿಶೇಷಣ ಪದ ಅಲ್ಲ. ‘ಗಂಡಸಿನಂತೆ’ ನಡೆಯುವ, ನಡೆದುಕೊಳ್ಳುವ, ಅಧಿಕಾರಯುತ ದನಿಯಲ್ಲಿ ಮಾತನಾಡುವ, ದರ್ಪದಿಂದ ನಡೆದುಕೊಳ್ಳುವ ಹೆಂಗಸನ್ನು ಟೀಕಿಸಲು, ಖಂಡಿಸಲು ಬಳಸುವ ಪದ. ಹೆಂಗಸಿನ ನಡತೆ–ವರ್ತನೆ ಹೇಗಿರಬೇಕು ಎಂಬ ನಮ್ಮ ಅಭಿಪ್ರಾಯವನ್ನು, ನಮ್ಮ ಈ ಪದಬಳಕೆಯ ರೀತಿ ಸೂಚಿಸುತ್ತದೆ. ಹೆಣ್ಣಾದವಳು ಮೃದುಸ್ವಭಾವ, ಮೆದುಮಾತು, ದನಿ, ನಡೆಗಳನ್ನು ಹೊಂದಿದವಳು ಮಾತ್ರವಲ್ಲ, ಇಂಥ ಸ್ವಭಾವವನ್ನೇ ಹೊಂದಿರಬೇಕು, ಇಲ್ಲವಾದರೆ ಅವಳನ್ನು ತಿದ್ದಿ ತೀಡಿ ಒಳ್ಳೆಯ ಹೆಂಗಸಾಗಿಸಬೇಕು ಎನ್ನುವ ಅಭಿಪ್ರಾಯ, ಉದ್ದೇಶವನ್ನೂ ಸೂಚಿಸುತ್ತದೆ.



‘ಹೆಣ್ಣಿಗ’ ಅಂದರೆ ಹೇಡಿ, ಷಂಡ, ನಪುಂಸಕ. ನಪುಂಸಕ ಪದ ಮೂರನೆಯ ಲಿಂಗ ಸೂಚಕವಾದರೂ, ಬಳಕೆಯ ಪ್ರಕಾರ ಗಂಡಸುತನ ಇಲ್ಲದವನನ್ನು, ಶಕ್ತಿಶಾಲಿಯಲ್ಲದವನನ್ನು ಅಥವಾ ‘ಹೆಣ್ಣಿನಂತೆ’ ನಡೆಯುವ, ಮಾತನಾಡುವ ಗಂಡಸನ್ನೂ ಹೆಣ್ಣಿಗ ಎನ್ನುತ್ತೇವೆ. ಹೆಣ್ಣಿಗನೆಂಬುದು ಗಂಡಸನ್ನು ಲೇವಡಿ ಮಾಡಲು ಬಳಸುವ ಪದ. ಗಂಡಸು ಎದೆಯುಬ್ಬಿಸಿ ನಡೆಯಬೇಕು, ಗಟ್ಟಿದನಿಯಲ್ಲಿಯೇ ಮಾತನಾಡಬೇಕು, ‘ಗಂಡಸುತನ’ವನ್ನು ತೋರಿಸುವ ರೀತಿಯಲ್ಲಿಯೇ ನಡೆದುಕೊಳ್ಳಬೇಕು ಎಂಬ ನಮ್ಮ ನಿರ್ಧಾರದ ಹೇರಿಕೆಯನ್ನು ಇಲ್ಲಿ ಕಾಣುತ್ತೇವೆ. ನಮ್ಮಲ್ಲಿ ‘ಗಂಡಸು’ತನಕ್ಕೆ ಅತಿಯಾದ ಪ್ರಾಮುಖ್ಯತೆ ಇರುವುದನ್ನು ಇದು ಸೂಚಿಸುತ್ತದೆ. ಅಂದರೆ, ಬೇರೆ ಬೇರೆ ರೀತಿಯ ವ್ಯಕ್ತಿತ್ವಗಳನ್ನು, ಗುಣ, ನಡತೆ, ವಿಲಕ್ಷಣತೆಗಳನ್ನು ಒಪ್ಪಿಕೊಳ್ಳುವ, ಸಹಿಸುವ ಮನೋಭಾವ ನಮ್ಮಲ್ಲಿ ವಿರಳ. ಇದು ಅರ್ಥಹೀನ ಮತ್ತು ಅತೀವ ಅಪಾಯಕಾರಿ. ಗಂಡಸಲ್ಲದ ಹಾಗೂ ‘ಗಂಡಸುತನವಿಲ್ಲದ’ ಪ್ರತಿ ವ್ಯಕ್ತಿಯ ಮೇಲೆ ನಡೆಯುವ ಎಲ್ಲಾ ಕ್ರೌರ್ಯಕ್ಕೂ ಈ ಮನಃಸ್ಥಿತಿಯೇ ಕಾರಣ.

## ಲಿಂಗಗಳು ಎರಡೇ? ಹಲವೇ?

ಹಲವು ವ್ಯಕ್ತಿಗಳು, ದೈಹಿಕವಾಗಿ, ಜೈವಿಕವಾಗಿ ಗಂಡಸಾಗಿ ಅಥವಾ ಹೆಂಗಸಾಗಿ ಹುಟ್ಟಿದರೂ, ತಮ್ಮ ನಡವಳಿಕೆ, ವೈಯಕ್ತಿಕ ಆಯ್ಕೆಗಳಲ್ಲಿ ಇನ್ನೊಂದು ಲಿಂಗಕ್ಕೆ ಸೇರಿದವರು ನಡೆದುಕೊಳ್ಳುವ ರೀತಿಯಲ್ಲಿ ಜೀವಿಸುವ ಹಂಬಲ ಹೊಂದಿರುತ್ತಾರೆ. ಉದಾಹರಣೆಗೆ, ಕೆಲವು ಗಂಡಸರು ಸೀರೆ, ಒಡವೆಗಳ ಬಗ್ಗೆ ವ್ಯಾಮೋಹ ಹೊಂದಿರುವುದು ಮಾತ್ರವಲ್ಲದೆ, ದುಪ್ಪಟ್ಟಾವನ್ನೋ, ಒಡವೆಯನ್ನೋ ತೊಡುವುದನ್ನೂ ನೋಡುತ್ತೇವೆ. ಹಾಗೆಯೇ ಹೆಣ್ಣುಮಕ್ಕಳು ಕೂದಲನ್ನು ಗಂಡಸರಂತೆ ಚಿಕ್ಕ


